# ಆಹಾ ಸುದ್ದಿ!

★ ಸಸಿತೋಟ



ಜಪಾನ್ ಸೇರಿದಂತೆ ಕೆಲವು ರಾಷ್ಟ್ರಗಳಲ್ಲಿ ಕೆಂಪು ವೈನ್‌ನಲ್ಲಿ ಸ್ನಾನ ಮಾಡಿ, ಮನಸೋ ಇಚ್ಛೆ ಕುಡಿದು ಆನಂದ ಪಡುವ ದಿನವೊಂದಿದೆ. ಅದು ಬೊರ್ಝೊಲಾ ನುವೊ. ನವೆಂಬರ್ ಮೂರನೇ ಗುರುವಾರದಂದು ಫ್ರಾನ್ಸ್‌ನ ಖ್ಯಾತ ವೈನ್ ಬೊರ್ಝೊಲಾ ಮಾರುಕಟ್ಟೆಗೆ ಬಿಡುಗಡೆಯಾಗುವುದನ್ನೇ ಕಾದು ಖರೀದಿಸುತ್ತಾರಂತೆ. ಈ ಬಾರಿ ಅಂದೇ ಅಂತರರಾಷ್ಟ್ರೀಯ ಪುರುಷರ ದಿನವೂ ಬಂದಿದ್ದು ಸಹಜವಾಗೇ ಜೋಷ್ ಇತ್ತಂತೆ. ಜೊತೆಗೆ ಅಂತರರಾಷ್ಟ್ರೀಯ ಶೌಚಾಲಯವೂ ದಿನವೂ ಅಂದೇ ಇತ್ತು. ಎಷ್ಟು ವೈನ್ ಕುಡಿದರೂ ಅದರ ಕೊನೆಯ ತಂಗುದಾಣ ಅದೇ ತಾನೆ.




ಪೋಲೆಂಡ್‌ನ ಮೊದಲ 'ಸಿಟ್ಟಿನ ಕೊಠಡಿ'ಯಿದು. ರೇಡಿಯೊ, ಟಿವಿ ಸೆಟ್, ಗೃಹ ಬಳಕೆ ಉಪಕರಣಗಳು, ಗಾಜು.. ಹೀಗೆ ಎಲ್ಲವನ್ನೂ ಇಡಲಾಗುತ್ತದೆ. ಸಿಟ್ಟಿನ ವ್ಯಕ್ತಿ ಅಲ್ಲಿಗೆ ಬಂದು ಮನಸೋ ಇಚ್ಛೆ ಎಲ್ಲವನ್ನೂ ಬಿಸಾಡಿ, ಒಡೆದು ಸಿಟ್ಟು ತಣಿದ ನಂತರ ಆಚೆ ಬರಬಹುದು. ಮೊದಲೇ ಶುಲ್ಕ ಕೊಡಬೇಕು. ಶುಲ್ಕ ಪಡೆಯುವವ ಗಾಜಿನ ಕೌಂಟರ್ ಬದಲು ಉಕ್ಕಿನ ಕೌಂಟರ್ ಹಿಂದೆ ಕುಳಿತುಕೊಳ್ಳಬಹುದು!

ಎಲ್ಲೆಂದರಲ್ಲಿ ಮೊಬೈಲ್‌ನಿಂದ ಸೆಲ್ಫಿ ತೆಗೆದುಕೊಳ್ಳುವವರಿಗೆ ಸಿಹಿ ಸುದ್ದಿ. ಭಾರತೀಯ ಅಂಚೆ ಇಲಾಖೆ ಈ ಸೆಲ್ಫಿ ಬಳಸಿ ಅಂಚೆ ಚೀಟಿ ಮಾಡುವ 'ಮೈ ಸ್ಟಾಂಪ್' ಎನ್ನುವ ಯೋಜನೆ ಜಾರಿಗೆ ತಂದಿದೆ. ನಿಗದಿತ ಶುಲ್ಕ ಕೊಟ್ಟರೆ ನಿಮ್ಮದೇ ಫೋಟೊ ಇರುವ 12 ಸ್ಟಾಂಪ್‌ಗಳು ಕೈ ಸೇರುತ್ತವೆ. ಒಳ್ಳೆಯ ಫೋಟೊ ಇರದಿದ್ದರೆ ಚಿಂತೆಯಿಲ್ಲ, ಸ್ಥಳದಲ್ಲೇ ಭಾವಚಿತ್ರ ತೆಗೆಯುವ ಸೌಲಭ್ಯವೂ ಇರಲಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವಿಟರ್ ಎಂದು ಸೇರಿಕೊಳ್ಳುತ್ತಿದ್ದ ಸೆಲ್ಫಿಗೂ ಅಂಚೆ ಚೀಟಿಯಲ್ಲಿ ಗೌರವ.

ಅಮೆರಿಕದ ಲೂಸಿಯಾನ ಥೀಮ್ ಪಾರ್ಕ್‌ನಲ್ಲಿರುವ ಚಿಂಪಾಂಜಿ ಕ್ಯಾಂಡಿ ಒಂಟಿತನ ತಾಳಲಾರದೆ ಸಿಗರೇಟ್, ಕೋಕ್ ಮೊರೆ ಹೋಗಿದೆಯಂತೆ. ಜೊತೆಗೆ ಆಗಾಗ ಶೂನ್ಯದಲ್ಲಿ ದೃಷ್ಟಿ ನೆಡುವುದಂತೆ. ಅಡ್ಡಿಯಿಲ್ಲ, ದುಃಖಭರಿತ ಕವಿತೆಗಳು ಹೊರ ಬರುವ ದಿನಗಳು ದೂರವಿಲ್ಲ ಎನ್ನುವುದರ ಸೂಚನೆಯಿದು.



ಬ್ಯಾಂಕಾಕ್‌ನಲ್ಲಿ ಇತ್ತೀಚೆಗೆ ನಡೆದ ಶ್ವಾನ ಪ್ರದರ್ಶನದಲ್ಲಿ ವ್ಯವಸ್ಥೆ ಮಾಡಿದ್ದ ವಿಶೇಷ ಫೇಷಿಯಲ್ ಇದು. ಬಸವನಹುಳುವಿನ ಫೇಷಿಯಲ್‌ಗೆ ಇದು ಸೆಡ್ಡು ಹೊಡೆಯಲಿದೆಯಂತೆ. ಕಳ್ಳರಿಂದ ಮನೆ ಕಾಯುವ ಕಾಯಕದ ಜೊತೆಗೆ ಫೇಷಿಯಲ್ ಕೂಡಾ ಮಾಡಿ ಸಂಪಾದಿಸಬೇಕಾದ ಪರಿಸ್ಥಿತಿ ಮುದ್ದಿನ ಸಾಕುಪ್ರಾಣಿಗಳದ್ದು.



ಕೋಳಿ ಮೊಟ್ಟೆಯಂತೆ ಕಾಣುವ ಇದು ಚೀನಾದಲ್ಲಿ ವ್ಯಕ್ತಿಯೊಬ್ಬನ ಹೊಟ್ಟೆಯೊಳಗಿಂದ ತೆಗೆದಿದ್ದು. ಗೆಡ್ಡೆಯೇನಲ್ಲ, ಕೊಬ್ಬಿನಿಂದಾಗಿದ್ದು ಎಂದು ವೈದ್ಯರು ಕೂಲಾಗಿ ಹೇಳಿದ್ದಾರಂತೆ. ಅಂತರ್ಜಾಲದಲ್ಲಿ ಈ ಚಿತ್ರ ಓಡಾಡುತ್ತಿದ್ದು, ಮೊಟ್ಟೆಪ್ರಿಯರು ನೋಡದಿರುವುದು ಒಳಿತು ಎಂಬ ಟ್ಯಾಗ್ ಬೇರೆ ಇದೆಯಂತೆ.